ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 1-6
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# 'ಕಂಚುಗನ್ನಡಿ' ನಾಟಕದಲ್ಲಿ ಅಹಲ್ಯೆಯ ಮನದ ತುಡಿತ

**ಅಶ್ವಿನಿ ಹೆಚ್. ಬಿ**
ಮಾನವಿಕ ವಿಭಾಗ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಮೈಸೂರು.

***Abstract:***

*ಉಷಾ ನರಸಿಂಹನ್ ಅವರ 'ಕಂಚುಗನ್ನಡಿ' ಎಂಬ ನಾಟಕ ಅಹಲ್ಯೆಯ ಸುತ್ತ ಹೆಣೆದಿರುವ ಕಥೆಯಾಗಿದೆ. ಕನ್ನಡಿಯು ನಮ್ಮ ಮನಸ್ಸಿನ ಆಸೆ-ಆಕಾಂಕ್ಷೆ ಕಾಮವನ್ನು ಪ್ರಚೋದಿಸುವ ಬಿಂಬವಾಗಿದೆ. ಇಲ್ಲಿ ಇಚ್ಛೆಯನ್ನು ಅದುಮಿ ಹಿಡಿಯಲಾರದೆ ಅಹಲ್ಯೆ ಸೋತಿದ್ದಾಳೆ. ಇಲ್ಲಿ ಬರುವ ಅಹಲ್ಯೆ, ಪುರಾಣದಲ್ಲಿ ಬರುವ 'ಅಹಲ್ಯೆ'ಯಲ್ಲ, ಪು.ತಿ.ನ ಅವರ 'ಅಹಲ್ಯೆ'ಯೂ ಅಲ್ಲ. 21ನೇ ಶತಮಾನದ ಮಹಿಳೆಯ ಅಂತರಂಗದ ತುಡಿತವಾಗಿದೆ. ಅಹಲ್ಯೆಯ ಸ್ವಭಾವ ಆಸೆ ನಿರಾಶೆಗಳ ಒತ್ತಡ, ಮಾನವರು ಮತ್ತು ದೇವತೆಗಳ ದ್ವಂದ್ವ ಭಾವಗಳ ಅಭಿವ್ಯಕ್ತಿಗೆ ಇಲ್ಲಿ ಅವಕಾಶ ಸಿಕ್ಕಿದೆ. ಕಾವ್ಯಮಯತೆಯೊಂದಿಗೆ ನಾಟಕೀಯ ಸನ್ನಿವೇಶಗಳು ಸೇರಿಕೊಳ್ಳುವುದರಿಂದ ಅಹಲ್ಯೆ ಆಕರ್ಷಕ ಸ್ವತಂತ್ರ ಕೃತಿಯ ರೂಪವನ್ನು ಪಡೆದಿರುವಂತೆ ತೋರಿಸಿದ್ದಾರೆ.*

***Keywords:*** *ಕನ್ನಡ ನಾಟಕಗಳು, ಉಷಾ ನರಸಿಂಹನ್, ಕಂಚುಗನ್ನಡಿ, ಅಹಲ್ಯೆ.*

**ಪೀಠಿಕೆ**

ಭಾರತೀಯ ವಾಙ್ಮಯ ಪರಂಪರೆಯಲ್ಲಿ ಅಹಲ್ಯೆ ವೃತ್ತಾಂತ ಪ್ರಾಚೀನವಾದುದು. ಇಂದ್ರ- ಅಹಲ್ಯೆಯರ ಸಂಗತಿ ಚಿರಪರಿಚಿತವಾದದ್ದು. ಇಂದ್ರನಿಗೆ 'ಅಹಲ್ಯಾಯ್ಯೆ ಜಾರಃ' (ಅಹಲ್ಯೆಯ ಪ್ರಣಯಿ) ಎಂಬ ವಿಶೇಷಣ ವೈದಿಕ ವಾಙ್ಮಯದಲ್ಲಿಯೇ ದೊರೆತಿದೆ. ವಿಶ್ವಾಮಿತ್ರನು ತನ್ನ ಯಜ್ಞ ಸಂರಕ್ಷಣೆಗಾಗಿ ರಾಮ ಲಕ್ಷ್ಮಣರನ್ನು ತನ್ನ ಜೊತೆ ಕರೆದುಕೊಂಡು ಹೊರಟನಷ್ಟೆ, ಯಜ್ಞವು ನಡೆಯಿತು. ಅದಕ್ಕೆ ವಿಘ್ನವನ್ನುಂಟು ಮಾಡಲು ಬಂದ ರಾಕ್ಷಸರನ್ನು ಕೊಂದನು. ಯಜ್ಞವು ಪೂರೈಸಿದ ಮೇಲೆ ವಿಶ್ವಾಮಿತ್ರನು ರಾಮ ಲಕ್ಷ್ಮಣರನ್ನು ಕರೆದುಕೊಂಡು ಮಿಥಿಲೆಯತ್ತ ಪ್ರಯಾಣ ಬೆಳೆಸಿದನು. ಮಿಥಿಲೆಯ ಪ್ರಾಚೀನ ಉಪವನವನ್ನು ಕಂಡು ರಾಮನು ವಿಶ್ವಾಮಿತ್ರನನ್ನು "ಕಾಂತಿಯುಕ್ತವಾದ ಆಶ್ರಮದಂತೆ ಕಾಣುತ್ತಾ, ಋಷಿಗಳಿಂದ ಶೂನ್ಯವಾದ ಈ ಸ್ಥಳ ಯಾವುದು? ಎಲೈ ಭಗವಾನ್, ಪೂರ್ವದಲ್ಲಿ ಇದು ಯಾರ ಆಶ್ರಮ, ಕೇಳ ಬಯಸುವೆನು" ಎಂದನು. ಅದಕ್ಕೆ ಉತ್ತರವಾಗಿ, ವಿಶ್ವಾಮಿತ್ರನು ಅಹಲ್ಯೆ-ಗೌತಮರ ವೃತ್ತಾಂತವನ್ನು ನಿರೂಪಿಸಿದನು. ಇದು ಮಹಾತ್ಮನಾದ ಗೌತಮ ಋಷಿಯ ಆಶ್ರಮ, ಆತನು ಇಲ್ಲಿ ತನ್ನ ಪತ್ನಿ ಅಹಲ್ಯೆಯೊಡನೆ ಇದ್ದುಕೊಂಡು ಬಹುಕಾಲ ತಪಸ್ಸನ್ನು ಆಚರಿಸುತ್ತಿದ್ದನು. ಹಾಗಿರಲು, ಒಂದು ದಿನ ಗೌತಮ ಇಲ್ಲದಿರುವ ಸಮಯವನ್ನು ಸಾಧಿಸಿ ಇಂದ್ರನು ಗೌತಮ ಋಷಿಯಂತೆಯೇ ವೇಷವನ್ನು ಧರಿಸಿ ಅಹಲ್ಯೆಯನ್ನು ಸಮೀಪಿಸಿದನು.

***Please cite this article as:*** ಅಶ್ವಿನಿ ಹೆಚ್.ಬಿ. (2023). 'ಕಂಚುಗನ್ನಡಿ' ನಾಟಕದಲ್ಲಿ ಅಹಲ್ಯೆಯ ಮನದ ತುಡಿತ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 1–6.

ವಾಲ್ಮೀಕಿ ಮಹರ್ಷಿಗಳು ತಮ್ಮ ಕಥಾನಾಯಕನಾದ ರಾಮನ ಮಹಿಮೆಯನ್ನು ತೋರಲು ಈ ಪ್ರಸಂಗವನ್ನು ತಂದಿದ್ದಾರೆ. ಇಂದ್ರ ಮಾರುವೇಷದಲ್ಲಿ ಬಂದು ಅಹಲ್ಯೆಯನ್ನು ಕೂಡಿದ್ದು ಎಂಬ ಸಾಮಾನ್ಯ ನಂಬಿಕೆ ಅಹಲ್ಯೆಯ ಬಗೆಗೆ ಮರುಕ ಹುಟ್ಟಿಸುತ್ತದೆ. ಆದರೆ ಪು.ತಿ.ನ ಅವರ ಅಹಲ್ಯೆ ನಾಟಕದಲ್ಲಿ ಮಾರುವೇಷದಲ್ಲಿದ್ದವನು ಹತ್ತಿರ ಬಂದಾಗ ಇಂದ್ರ ಎಂದೂ ಗೊತ್ತಾದರೂ, ಅಹಲ್ಯೆ ಸ್ವಗತದಲ್ಲಿ ಅವನನ್ನು ಕರೆಯುತ್ತಾಳೆ. ಮದನನ ಬಾಣಕ್ಕೆ ಘಾಸಿಗೊಂಡು ಗೌತಮನು ಬರುವಷ್ಟರಲ್ಲಿ ಇಂದ್ರ ಮತ್ತು ಅಹಲ್ಯೆಯರ ಸಮಾಗಮ ನಡೆದು ಹೋಗಿರುತ್ತದೆ.

ಯಾರೇ ಪೌರಾಣಿಕ ವಸ್ತುವೊಂದನ್ನು ಆರಿಸಿಕೊಂಡಾಗ ಸಮಕಾಲೀನ ಪ್ರಜ್ಞೆ, ಪರಿಸರ, ಸಾಮಾಜಿಕ ಮೌಲ್ಯ, ಸಾಂಸ್ಕೃತಿಕ ಹಿನ್ನೆಲೆ– ಈ ಮುಂತಾದ ಮಾನದಂಡಗಳನ್ನು ಮರೆಯುವಂತಿಲ್ಲ. ಆಧುನಿಕ ದೃಷ್ಟಿಯ 'ಕಂಚುಗನ್ನಡಿ' ನಾಟಕದಲ್ಲಿ ಅಹಲ್ಯೆಯ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆಯೇ? ಎಂಬ ಪ್ರಶ್ನೆಯು ಉದ್ಭವಿಸಿದಾಗ ಅದು ಈ ಕಾಲದ ವೈಚಾರಿಕತೆಯನ್ನು ಪೋಷಿಸುತ್ತದೆ. ಹೆಣ್ಣಿನ ಪರಾಧೀನ ಸ್ಥಿತಿಯನ್ನು ಅಹಲ್ಯೆಯ ಈ ಮಾತುಗಳು ಬಿಚ್ಚಿಡುತ್ತವೆ. "ನಮ್ಮ ಇಷ್ಟವೆಂದು ನಮಗೇನಿದೆ ಮಾಧವಿ? ಅಪ್ಪ ಹೇಳಿದವರನ್ನು ಮದುವೆಯಾಗಬೇಕು. ಗಂಡ ಇಷ್ಟಪಟ್ಟಂತೆ ಬದುಕಬೇಕು. ಇಷ್ಟೇ ಅಲ್ಲವೇ ನಮ್ಮ ಬದುಕು?" ತನ್ನ ಮಾನಸಿಕ ತೊಳಲಾಟವನ್ನು ತಾನು ಜಾರೆಯಾದುದರ ಕಾರಣವನ್ನು ತಿಳಿಸುತ್ತಾಳೆ. ಸ್ತ್ರೀಯರ ಅಭಿಪ್ರಾಯಗಳಿಗೆ ಅವರ ಆಸೆಗೆ ಕಿಂಚಿತ್ತೂ ಬೆಲೆ ಇರಲಿಲ್ಲ. ಅವರು ಜೂಜಿನ ವಸ್ತುಗಳಾಗಿದ್ದರು. ಅಹಲ್ಯೆಯು ಬಾಲ್ಯ–ಯೌವ್ವನದ ಕಾಲದಲ್ಲಿ ವಯೋಗತ ವಿಷಯ ವಿಕಾರಗಳಿಗೆ ತುತ್ತಾಗಿದ್ದಳು. ಹಾಗಾಗಿ ತಂದೆ ಮುದ್ಗಲನ ಇಚ್ಛೆಯಂತೆ ಗೌತಮನನ್ನು ವಿವಾಹವಾದಳು. "ಪಾತಿವ್ರತ್ಯ ಅದನ್ನೇ ಹೇಳುತ್ತಲ್ಲ. ಗಂಡನನ್ನು ಮೀರಿದ ಊಟ–ಉಡುಗೆ ಏನೂ ನಮಗಿರಬಾರದಲ್ಲ" ಸಾಹಿತ್ಯದಲ್ಲಿ ಹೆಣ್ಣನ್ನು ಪ್ರತಿನಿಧಿಸುವಾಗ ಆಕೆಯನ್ನು ಅನ್ಯವೆಂದು, ಕೊರತೆಯೆಂದು, ನಿಸರ್ಗದ ಭಾಗವೆಂದು ಚಿತ್ರಿಸುವುದನ್ನು ಪ್ರಶ್ನಿಸುವುದು ಸ್ತ್ರೀವಾದದ ಕಾರ್ಯವಾಗಿದೆ. ಕನ್ನಡ ಸಾಹಿತ್ಯವೂ ಹೆಣ್ಣನ್ನು ತಾಯಿ, ಪತ್ನಿ ಎಂದೂ, ತಾಯಿಯಾದವಳಿಗೆ ಮಕ್ಕಳನ್ನು ಪೋಷಿಸುವ, ಮಕ್ಕಳು ಎಸಗುವ ಯಾವುದೇ ಬಗೆಯ ಹಿಂಸೆ ಮತ್ತು ಉಪಟಳಗಳನ್ನು ಕ್ಷಮಿಸುವ ಕರ್ತವ್ಯವನ್ನು ಆರೋಪಿಸುತ್ತದೆ. ಪತ್ನಿಯಾದವಳು ಗಂಡನಿಗೆ ವಿಧೇಯಳಾಗಿದ್ದು ಕೊಂಡು, ಆತನ ಎಲ್ಲ ಬಯಕೆಗಳನ್ನು ಈಡೇರಿಸಬೇಕು, ಆತನ ಹಿಂಸೆಗಳನ್ನು ಸಹಿಸಿಕೊಂಡಿರಬೇಕು ಎಂಬ ಕರ್ತವ್ಯಗಳನ್ನು ಹೇರುತ್ತದೆ. ಹೆಣ್ಣು ಗಂಡಸಿನ ಭೋಗದ ಸಾಮಗ್ರಿಯಾಗಿ ಕಾರ್ಯ ನಿರ್ವಹಿಸುವುದನ್ನು ಕರ್ತವ್ಯವೆಂದು ಸೂಚಿಸಲಾಗಿದೆ. ತನ್ನ ಆಸೆಗಳನ್ನು ಅದುಮಿಟ್ಟುಕೊಂಡು ನಾರುಮಡಿ ಉಟ್ಟುಕೊಂಡು, ಕಂದಮೂಲಗಳನ್ನು ತಿಂದುಕೊಂಡು ಸನ್ಯಾಸಿನಿಯಂತೆ ಬದುಕುತ್ತಾಳೆ. ಇದು ಅವಳಿಗಾಗುತ್ತಿರುವ ಅನ್ಯಾಯ ಎಂಬ ಅರಿವಿದೆ ಅವಳಿಗೆ.

***ಕಂಚಿನ ಕನ್ನಡಿ ಮಿಂಚುತಿದೇ***

***ಸಂಚಿನ ಮುನ್ನುಡಿ ಹೊಂಚುತಿದೇ***

ಇಲ್ಲಿ ಬರುವ ಅಹಲ್ಯೆ ಆಧುನಿಕ ಪ್ರೇಮಿಯಂತೆ ಇಂದ್ರನೊಡನೆ ಓಡಾಡುತ್ತಾಳೆ. ಅವಳ ಮುಂದೆ ಇಂದ್ರ ಮಾರುವೇಷದಲ್ಲಿ ಬರುವುದಿಲ್ಲ. ಅಹಲ್ಯೆಗೆ ಇಂದ್ರ ಎಂಬ ಸ್ಪಷ್ಟ ಅರಿವಿದೆ. ಇಂದ್ರನು ಕೊಡುವ ಕಂಚುಗನ್ನಡಿ, ರೇಷಿಮೆಯ ಕೂದಲು ಮುಂತಾದ ದೇವಲೋಕದ ಉಡುಗೊರೆಗಳನ್ನು ಅವಳು ಒಪ್ಪಿಕೊಳ್ಳುತ್ತಾಳೆ. "ಮೊದಲೇ ಅವಳಿಗೆ ಆಭರಣ ಆ ಭೂಷಣಗಳೆಂದರೆ ಮೋಹ". ಅಹಲ್ಯೆ ಬಾಹ್ಯ ಸುಖಗಳಿಗೆ ಆಸೆ ಪಡುತ್ತಿದ್ದುದ್ದು ಗೌತಮನಿಗೆ ಗೊತ್ತಿದ್ದು ಅವಳನ್ನು ವಿವಾಹವಾಗಿ ಪಂಜರದಲ್ಲಿ ಬಂಧಿಸಿದ್ದು ತಪ್ಪಲ್ಲವೇ? ತಾನು ಪ್ರಾಪಂಚಿಕ ಸುಖಗಳಿಂದ ದೂರವಿದ್ದು ತನ್ನಂತೆಯೇ ತನ್ನ

ಪತ್ನಿಯು ಪ್ರಾಪಂಚಿಕ ಸುಖಗಳಿಂದ ದೂರವಿರಬೇಕೆಂದು ಒತ್ತಡ ಹೇರುವುದು ಎಷ್ಟರ ಮಟ್ಟಿಗೆ ಸರಿ ಎನಿಸಿದೆ?. ಗೌತಮ ಮತ್ತು ಅಹಲ್ಯೆ ಇವರಿಬ್ಬರ ವಯಸ್ಸಿನಲ್ಲಿ ಸಾಕಷ್ಟು ಅಂತರವಿರುವುದರಿಂದ ಅಹಲ್ಯೆಗೆ ಒಬ್ಬ ಮಗನಾದರೂ ತೃಪ್ತಿಯಿಲ್ಲ. ಇಂದ್ರನ ವೈಭವ ಅವನ ರೂಪ, ಯೌವ್ವನಗಳಿಗೆ ಮಾರುಹೋದಳು. ಅವನಿಗೆ ತನ್ನ ಮನಸ್ಸನ್ನು ಒಪ್ಪಿಸಿದ್ದಳು. ಗೌತಮನ ಪ್ರೀತಿಯಲ್ಲಿ ಯಾವುದೋ ನ್ಯೂನತೆ ಇರಬೇಕು. ಆ ನ್ಯೂನತೆಯನ್ನು ಪೂರ್ಣಗೊಳಿಸಿಕೊಳ್ಳಲು ತವಕಿಸುತ್ತಿದ್ದಳು.

"ನನ್ನಂತಹ ಸುರಪತಿಗೆ ಉತ್ಸವ ಮೂರ್ತಿಗಳು ಎಷ್ಟಿದ್ದರೇನು? ಅದಕ್ಯಾವ ಭಂಗ–ಹಂಗುಗಳಿಲ್ಲವಲ್ಲ". ಇಂದ್ರನಿಗೆ ಹೆಣ್ಣು ಬರೀ ಭೋಗದ ವಸ್ತುವಾಗಿ, ತಾನು ಉಂಡು ಎಸೆಯುವ ಕಾಮದ ರೂಪ. ತನ್ನ ಲೋಕದಲ್ಲಿ ಎಷ್ಟೇ ಹೆಣ್ಣುಗಳಿದ್ದರೂ ಅದು ಸಾಕಾಗದೇ ಸುಂದರವಾಗಿರುವ ಎಲ್ಲವೂ ತನ್ನ ಸ್ವತ್ತು ಎನ್ನುವಂತೆ ಅಹಲ್ಯೆಯನ್ನು ಬಾಣಕ್ಕೆ ಬೀಳಿಸಿಕೊಳ್ಳುತ್ತಾನೆ. ಪುರುಷನಿಗೆ ಯಾವುದೇ ನಿರ್ಬಂಧವೇನಿರುವುದಿಲ್ಲ. ಆಗಿನ ಜನ ಊರಿಗೊಂದು ಕೆರೆ, ಕಾಮಿಗೊಂದು ಶೃಂಗಾರಪೇಟೆ ಕೊಳ್ಳುವವರಿಗೆ ಒಂದು ಗೊತ್ತಾದ ಪೇಟೆಯಿಲ್ಲದಿದ್ದರೆ ಅವರು ಮನೆಮನೆಯೂ ಅಂಗಡಿ ಎಂದು ತಿಳಿದಾರು. ಇದು ಇಂದಿನ ನವನಾಗರಿಕ ಸುಧಾರಕರು ಆಲೋಚಿಸಬೇಕಾದ ವಿಷಯ. ಹೆಣ್ಣು ವಿವಾಹಕ್ಕೆ ಮುಂಚೆ ತನ್ನ ಭಾವೀ ಪತಿಗಳಲ್ಲಿ ರೂಪು, ಐಶ್ವರ್ಯ ವಿದ್ಯೆ ಔದಾರ್ಯ ಇತ್ಯಾದಿ ಗುಣಗಳೆಲ್ಲವೂ ಇರಬೇಕೆಂದು ಬಯಸುತ್ತಾರೆ. ಆದರೆ ಅದೆಲ್ಲಾ ವ್ಯರ್ಥವೆಂದು ತಿಳಿಯುವುದು ಮದುವೆಯಾದ ಮೇಲೆ ಅನುಭವಕ್ಕೆ ಬರುತ್ತದೆ.

ಮುದ್ಗಲ ರಾಜನು ಮಹಾ ಲಾವಣ್ಯವತಿಯಾದ ಅಹಲ್ಯೆಗೆ ಸ್ವಯಂವರವನ್ನು ಏರ್ಪಡಿಸಿ 'ಎಂಟು ದಿನಗಳೊಳಗೆ ಯಾರು ನಮ್ಮ ಭಾರತ ದೇಶದ ಸಮಸ್ತ ತೀರ್ಥಕ್ಷೇತ್ರಗಳನ್ನು ಸುತ್ತಿ ಬರುವನೋ ಅವನಿಗೆ ಅಹಲ್ಯೆಯನ್ನು ಪಾಣಿಗ್ರಹಣ ಮಾಡಿಸಿಕೊಡುವೆನು' ಎಂಬುದಾಗಿ ಹೇಳುತ್ತಾನೆ. ಇಂದ್ರನು ಪಣವನ್ನು ಗೆಲ್ಲಲು, ತಕ್ಷಣ ತನ್ನ ಕುದುರೆ ಏರಿ ಹೊರಡುತ್ತಾನೆ. ಇದೇ ಸಮಯಕ್ಕೆ ಸರಿಯಾಗಿ ಗೌತಮನು ಒಂದು ಕರು ಹಾಕಲು ತಯಾರಾದ ಕಪಿಲೆ ಹಸುವನ್ನು ತಂದು ಮುದ್ಗಲನ ಎದುರು ನಿಲ್ಲಿಸಿ, ಅದು ಕರು ಹಾಕುತ್ತಿರುವಾಗ ಅದಕ್ಕೆ ಮೂರು ಪ್ರದಕ್ಷಿಣೆ ಹಾಕುತ್ತಾನೆ. ಗೋಮಾತೆಗೆ ಒಂದು ಪ್ರದಕ್ಷಿಣೆ ಹಾಕಿದರೆ ಒಮ್ಮೆ ಜಂಬೂದ್ವೀಪದ ಸಮಸ್ತ ತೀರ್ಥದರ್ಶನದ ಫಲ ಸಿಗುತ್ತದೆ ಎಂದು ಶ್ರುತಿ–ಸ್ಮೃತಿಗಳು ಹೇಳುತ್ತವೆ. ಹಾಗಾಗಿ ಋಷಿಮುನಿಗಳ ಮಾತಿಗೆ ಮಣಿದು ಧಾರೆ ಎರೆದು ಕೊಟ್ಟನು. ಇಂದ್ರನಿಗೆ ಅಹಲ್ಯೆ ವಿವಾಹ ನಿಶ್ಚಯವಾಗಿದ್ದು ಸಿಡಿಲೆರಗಿದಂತಾಗುತ್ತದೆ. ಈ ಅಹಲ್ಯೆಯನ್ನು ಅನುಭವಿಸಿಯೇ ತೀರುತ್ತೇನೆ ಎಂದು ಇಂದ್ರನು ಪ್ರತಿಜ್ಞೆ ಮಾಡಿ ಅದನ್ನು ತೀರಿಸಿಕೊಂಡನು.

"ಇಂದ್ರ ಬ್ರಾಹ್ಮಿ ಮುಹೂರ್ತಕ್ಕೂ ಮೊದಲು, ಗೌತಮರು ಶೌಚಸ್ನಾನಕ್ಕೆ ಹೊರಟಾಗ, ಅವರ ಶಯ್ಯೆಯಲ್ಲಿ ಈ ಸುರಸುಂದರಿಯಾದ ಅಹಲ್ಯೆಯನ್ನು ರಮಿಸುತ್ತಾನೆ". ಗೌತಮನಿಗೆ ಇದು ತಿಳಿದು, ಅಹಲ್ಯಾಜಾರ ಇಂದ್ರ, ಕಪಟಿ ದೇವೇಶ. ನಿನ್ನ ಜಾರತನಕ್ಕೆ ನನ್ನ ಮಡದಿಯೇ ಬೇಕಿತ್ತೇ? ಎಂದು ಶಾಪ ಕೊಡಲು ಸಿದ್ದಗೊಂಡಾಗ, ಅಹಲ್ಯೆ ದೇವೇಶನನ್ನು ಶಪಿಸಬೇಡಿ ಎಂದಳು.

ದುರ್ಬುದ್ಧಿಯಿಂದ – "ಮತಿಂ ಚಕಾರ ದುರ್ಮೇಧಾ ದೇವರಾಜ ಕುತೂಹಲಾತ್" ಇವು ವಾಲ್ಮೀಕಿಯ ಮಾತುಗಳು (ಬಾಲಕಾಂಡ, 48. 19) – ಇಂದ್ರನಲ್ಲಿ ಕೂಡಿದಳು. ಅಷ್ಟೇ ಅಲ್ಲ, ಸಂಗ ಮುಗಿದ ಮೇಲೆ "ಕೃತಾರ್ಥಾಸ್ಮಿ, ಸುರಶ್ರೇಷ್ಠ" (ಅದೇ 48.30) ಎಲೈ ಸುರಶ್ರೇಷ್ಠನೇ ನನ್ನ ಇಷ್ಟಾರ್ಥವು ನೆರವೇರಿತು ಎಂದೂ ಹೇಳಿದಳು. ಆದುದರಿಂದ ಅವಳಿಗೆ ಇಂದ್ರನನ್ನು ಕೂಡುವ ಬಯಕೆ ಇತ್ತೆಂಬುದು ಸ್ಪಷ್ಟವಾಗಿಯೇ ಇದೆ.

ಗೌತಮನು ಕನಸಿನಲ್ಲಿ ಕಂಡರಿಯದ ಸೋಲನ್ನು ಅನುಭವಿಸುತ್ತಾನೆ. ನಿರಾಶೆ, ದುಃಖ, ಕೋಪ, ಆತ್ಮನಿಂದನೆ ಎಲ್ಲವೂ ಒಟ್ಟಿಗೆ ಘಟಿಸುತ್ತದೆ. ಯಾವುದರ ಪ್ರಮಾಣ ಎಷ್ಟು ಎಂಬುದು ಅಳತೆಗೆ ಸಿಗಲಾರದಷ್ಟು, ಶಾಪಹತಳಾದ ಮಡದಿಗಿಂತ ಇಂದ್ರನ ಬಗೆಗೆ ಹೆಚ್ಚು ಸಿಟ್ಟುಗೊಳ್ಳುತ್ತಾನೆ. ಕೊನೆಗೆ ವಿಧಿನಿಯಮ ಎಂದು ಸಮಾಧಾನ ತಾಳುತ್ತಾನೆ. ಅಹಲ್ಯೆ ಸುರಲೋಕದವಳಾಗದೆ ಸಾಮಾನ್ಯ ಸ್ತ್ರೀಯಾದ್ದರಿಂದ ಸುಳ್ಳು ತಟವಟ ಕಪಟಗಳನ್ನರಿಯದೆ ಪತಿಯನ್ನು ಸ್ವೀಕರಿಸುವಂತೆ ಇಂದ್ರನನ್ನು ಸ್ವೀಕರಿಸುತ್ತಾಳೆ. ಕ್ರಮೇಣ ವಸ್ತು ಸ್ಥಿತಿಯ ಅರಿವಾಗುತ್ತದೆ. ಮುಳಿಯುತ್ತಾಳೆ, ಪ್ರತಿಭಟಿಸುತ್ತಾಳೆ.

ಇಂದ್ರನಿಗೂ ಒಂದು ಗುರಿಯಿತ್ತು. ಸುರಕಾರ್ಯದಲ್ಲಿ ಪಾಲ್ಗೊಳ್ಳುವುದು, ಗೌತಮನ ತಪೋಭಂಗ ಮಾಡುವುದು, ಆ ತಪೋಧನವನ್ನು ಧರ್ಮೋದ್ಧಾರಕ್ಕಾಗಿ ವ್ಯಯಮಾಡಿಸುವುದು. ಭೀಕರ ರೌದ್ರತೆಯನ್ನುಂಟು ಮಾಡುವ ಶಕ್ತಿ ಸ್ತ್ರೀಮಾನಭಂಗದಲ್ಲಿದೆ ಎಂದು ತಿಳಿದು ಅಹಲ್ಯಾಸಂಗವನ್ನು ಬಯಸಿದ. ಅದರಿಂದುಂಟಾಗಬಹುದಾದ ಕಷ್ಟಗಳನ್ನನುಭವಿಸಲೂ ಸಿದ್ಧನಾಗಿದ್ದ. ಆದ್ದರಿಂದಲೇ ಅವನು, ಕುಟೀರವನ್ನು ದಾಟಿ ಗೌತಮನು ಬರುವ ದಾರಿಯಲ್ಲೇ ಹೋದದ್ದು. ಇಲ್ಲದಿದ್ದರೆ ಕಳ್ಳನಂತೆ ಹಿಂಬಾಗಿಲಿನಲ್ಲಿ ಹೊರಬಿದ್ದು ಹೋಗಬೇಕಿತ್ತು. ಆತನು ಗೌತಮನ ಕಣ್ಣಿಗೆ ಕಾಣಿಸಿಕೊಳ್ಳದೆ ಅವನ ಶಾಪಕ್ಕೆ ಸ್ವಾಗತ ಬಯಸದಿದ್ದರೆ ಸುರಕಾರ್ಯವೆಲ್ಲಾ ವ್ಯರ್ಥವಾಗುತ್ತಿತ್ತು.

ಅಹಲ್ಯೆ "ನಾನು ಜಾರಿಣಿಯಾದದ್ದು ನನ್ನೊಬ್ಬಳ ತಪ್ಪಿನಿಂದಲ್ಲ. ನಿಮ್ಮ ಉಪೇಕ್ಷೆಯಿಂದ ಕೂಡ! ನಿಮ್ಮ ಕಾಠಿಣ್ಯದಿಂದ ರಾಗ–ಅನುರಾಗದ ಯೌವ್ವನ ಕಾಲದಲ್ಲಿ, ಕಠಿಣ ನಿಯಮಗಳಿಗೆ ನನ್ನನ್ನೊಳಪಡಿಸಿ; ತಿನ್ನಲು, ಉಣ್ಣಲು, ರಮಿಸಲು, ಕೂಡಲು, ಒಡನಾಡಲು ಮುಹೂರ್ತಗಳ ಬೇಡಿಗಳನಿಟ್ಟಿದ್ದು, ನಿಮ್ಮದೇ ತಪ್ಪಲ್ಲವೆ ದೇವ? ಉಡಬಾರದು, ಉಣಬಾರದು, ನಲಿಯಬಾರದು, ನಗಬಾರದು ಈ ಎಲ್ಲ ಬಾರದುಗಳ ಮಧ್ಯೆ ನನಗೆ ಬೇಕಾದ್ದು ಒಂದಿರುತ್ತದೆಯಲ್ಲ". ಇಂದ್ರಿಯಗಳ ಮೇಲೆ ಹತೋಟಿ ಪಡೆದಿದ್ದಳು. ಈಗ ಇಂದ್ರಿಯಗಳು ಹೇಳಿದಂತೆ ಅವಳು ಕೇಳುತ್ತಿರಲಿಲ್ಲ. ಬದಲು ಅವುಗಳು ಅಹಲ್ಯೆ ಹೇಳಿದ್ದಂತೆ ಕೇಳುತ್ತಿದ್ದವು. ಮಾನವನು ಪರಿಸ್ಥಿತಿಗಳ ಪೆಟ್ಟು ತಿಂದಾಗ, ಪ್ರಪಂಚದ ಕಪಟ, ವಂಚನೆಗಳನ್ನು ತಿಳಿದಾಗ, ವಿಷಯ ವಿಕಾರಗಳ ಮೇಲೆ ಹತೋಟಿ ಪಡೆದಾಗ ತಪ್ತ ಕಾಂಚನದಂತೆ ಶುದ್ಧನಾಗುತ್ತಾನೆ. ಗಂಧವನ್ನು ತೇಯ್ದಷ್ಟೂ ಅದರ ಸೌರಭ ಘನವಾಗುತ್ತ ಹೋಗುತ್ತದೆ.

ಅಹಲ್ಯೆ ತನ್ನನು ಕೂಡಿದ ಗಂಡಿನಿಂದ ಏನಿಲ್ಲವಾದರು ಕೃತಜ್ಞತೆಯನ್ನು ನಿರೀಕ್ಷಿಸುತ್ತಾಳೆ. ಅದೂ ಸಿಗದಾದಾಗ ತುಂಬಾ ನಿರಾಶೆಗೊಳ್ಳುತ್ತಾಳೆ.

***ಬಾಳೆಯ ಎಲೆಯನು ಉಣ್ಣಲು ಬಳಸಿ***
***ಎಸೆಯುವ ತರಹವೆ ವರ್ತಿಸಿದ***

ಇಲ್ಲಿ ನಾಣ್ಣುಡಿ ಚರಿತಾರ್ಥವಾಗಿದೆ. ಇಂದ್ರ "ಎಲ್ಲಾ ನನ್ನ ಹಣೆ ಬರಹ. ಆ ಅಹಲ್ಯೆಯ ಥಳಕು ಬಳುಕಿಗೆ ಮನಸೋತು ಕೇಡು ತಂದುಕೊಂಡೆ. ಆಚಾರ್ಯ ಪತ್ನಿ ನೆಟ್ಟಗಿರಬೇಡವೇ ಅವಳು. ಮರಳು ಮಾಡಿಬಿಟ್ಟಳು ಮಾಯಾಂಗನೆ. ಹೆಂಗಸರು ಬಿಗಿಯಾಗಿದ್ದರೆ ಗಂಡಸರೇಕೆ ತಪ್ಪೆಸಗುತ್ತೇವೆ" ಎಂದು ಆಧುನಿಕ ಖಳನಾಯಕನಂತೆ ಮಾತನಾಡುತ್ತಾನೆ. ಅಹಲ್ಯೆಗೆ ಸಿಡಿಲು ಬಡಿದ ಅನುಭವ "ಸುರಪತಿಯ ಪ್ರೇಮದ ಸೌಧ ಲಟಲಟನೆ ಕುಸಿದು ಬಿತ್ತು". ಅಹಲ್ಯೆಯ ಮೇಲೆ ಅವನು ಮಿಥ್ಯಾರೋಪ ಹೊರಿಸುತ್ತಾನೆ.

ಇಂದ್ರನಿಂದ ದೌರ್ಬಲ್ಯಕ್ಕೊಳಗಾಗಿ ಸಾವಿರಾರು ವರ್ಷ ಆಹಾರಾದಿಗಳಿಲ್ಲದೆ ಲೋಕ ಸಂಪರ್ಕವೇ ಇಲ್ಲದೆ ಘೋರ ತಪಸ್ಸನ್ನಾಚರಿಸಬೇಕಾಯಿತು. ಗೌತಮನು ಅಹಲ್ಯೆಗಿದ್ದ ರೂಪಿನ ಗರ್ವವನ್ನು ನಿಂದಿಸಿದನೇ ಹೊರತು ಶಾಪಕೊಡಲಿಲ್ಲ. ಶ್ರೀರಾಮನ ದರ್ಶನದಿಂದ ಶಾಪ ವಿಮೋಚನೆಯಾಗುವುದೆಂದು

ಹೇಳಿ ಗೌತಮನು ಹಿಮಾಲಯಕ್ಕೆ ಹೊರಟು ಹೋದರು. "ಆದರ್ಶ ಗೃಹಸ್ಥನಾಗಿರುವುದು ಆದರ್ಶ ಸಂನ್ಯಾಸಿಯಾಗುವುದಕ್ಕಿಂತ ಕಡುಕಷ್ಟ" (ಸ್ವಾಮಿ ವಿವೇಕಾನಂದ).

ಶ್ರೀರಾಮನ ದರ್ಶನವೇ ಅವಳ ತಪಸ್ಸಿನ ಗುರಿಯಾಯಿತು. ಆ ಘೋರ ನಿರೀಕ್ಷಣಾ ತಪಸ್ಸು ಶ್ರೀರಾಮನಿಗೆ 16–17 ವರ್ಷಗಳಾದಾಗ ಸಿದ್ಧಿಸಿತು. ಗೌತಮನ ಶಾಪಕ್ಕೂ ಶ್ರೀರಾಮನ ಜನನಕ್ಕೂ ಸಾವಿರಾರು ವರುಷಗಳ ಅಂತರವಿದೆ. ರಾಮಾಯಣದಲ್ಲಿ ಅಹಲ್ಯಾ ಪ್ರಸಂಗ ಬರುವುದಕ್ಕೆ ಇದೇ ಕಾರಣವಾಯಿತು.

ಈ ಅಹಲ್ಯಾ ಪ್ರಸಂಗ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಇನ್ನೂ ಚೇತೋಹಾರಿಯಾಗಿ ಸೋಪಜ್ಞತೆಯಿಂದ ಕೂಡಿದೆ. ಕುವೆಂಪು ಅವರು ಅಹಲ್ಯಾ ಪ್ರಕರಣಕ್ಕೆ ಒಂದು ಸಂಚಿಕೆಯನ್ನೇ ಮುಡುಪಾಗಿಟ್ಟು, ಆ ಮಹಾದೇವಿಯನ್ನು 'ಶಿಲಾ ತಪಸ್ವಿನಿ' ಎಂದು ಕರೆದು ತಮ್ಮ ಅನನ್ಯ ಭಕ್ತಿ–ಗೌರವವನ್ನು ತೋರಿದ್ದಾರೆ.

***'ಗೌತಮ ಮಹಾಮುನಿಯ ಶಾಪದಿನಹಲ್ಯೆ ತಾಂ***
***ವರ್ಷ ಶತಮಾನಗಳಿಂದೆ ಜಡರೂಪದಿಂ***
***ನಿಷ್ಠುರ ಶಿಲಾತಪಸ್ವಿನಿಯಾಗಿ, ಕನಿಕರದ***
***ಕಣ್ಗೆ ಬಾಹಿರೆಯಾಗಿ, ಜಗದ ನಿರ್ದಾಕ್ಷಿಣ್ಯ***
***ವಿಸ್ಮೃತಿಗೆ ತುತ್ತಾಗಿ'***

ಹೀಗೆ ಜಗತ್ತಿನ ಅವಜ್ಞೆಗೆ ಪಾತ್ರಳಾಗಿ ಶಿಲೆಯಾಗಿದ್ದ ಅಹಲ್ಯೆಯ ತಪಃ ಕ್ಷೇತ್ರವನ್ನು ರಾಮ ಪ್ರವೇಶಿಸಿದಾಗ ಆತನಿಗೆ ಆದ ಅನುಭೂತಿ ಪ್ರೀತಿಯ ಸ್ನಿಗ್ಧತೆಯಿಂದ ಕೂಡಿದ್ದಾಗಿದೆ ಅಹಲ್ಯೆಯಲ್ಲಿ ತಾಯಿಯನ್ನು ಕಂಡ ರಾಮ ಅಹಲ್ಯೆಯ ಮೂಕವೇದನೆಯಲ್ಲಿ ತಾಯಿಯ ಸಂಕಟವನ್ನು ಕಾಣುತ್ತಾನೆ. ಏಕೆಂದರೆ ಅದೇ ಆಗ ವಿಶ್ವಾಮಿತ್ರರ ಜತೆ ಬಂದ ರಾಮ ತಾಯಿಯನ್ನು ಬಿಟ್ಟು ಬಂದಿದ್ದಾನೆ. ತಾಯಿಯ ನೆನಪಿನ ಗುಂಗು ಅವನನ್ನು ಕಾಡುತ್ತಿದೆ. ಇಲ್ಲಿ ಶಿಲೆಯಾಗಿರುವ ಅಹಲ್ಯೆ ಕೌಸಲ್ಯೆಯಾಗಿ ತನ್ನನ್ನು ಕರೆಯುತ್ತಿದ್ದಾಳೆ ಎಂದು ಅನ್ನಿಸುವುದು ಸಹಜವಾಗಿಯೂ ಮನೋವೈಜ್ಞಾನಿಕವಾಗಿಯೂ ಇದೆ. ತಾಯಿಯ ನೋವನ್ನು ಮಗ ಮಾತ್ರ ಅರ್ಥಮಾಡಿಕೊಳ್ಳಬಲ್ಲನು ಎನ್ನುವ ಮಟ್ಟಿಗೆ ಚಿತ್ರಿಸಿದ್ದಾರೆ ಕುವೆಂಪು.

ಈ ನಾಟಕದಲ್ಲಿ ಬಹಳ ಸೊಗಸಾದ ಅಂಶವೆಂದರೆ ಇಂದ್ರ–ಅಹಲ್ಯೆಯ ಸಮಾಗಮದಿಂದ ಉದಯಿಸಿದ ಮಗು. ಶಾಪಗ್ರಸ್ತ ಅಹಲ್ಯೆ ಗರ್ಭಿಣಿಯಾಗುವುದು, ಹುಲ್ಲು ಮನೆಯಲ್ಲಿ ಅವಳು ಹೆಣ್ಣು ಮಗುವಿಗೆ ಜನ್ಮಕೊಡುವುದು. ಆ ಮಗುವನ್ನು ಅಷ್ಟಾವಕ್ರ ಋಷಿ ತೆಗೆದುಕೊಂಡು ಜನಕರಾಜನ ನೇಗಿಲ ಮೊನೆಗೆ ಸಿಗುವಂತೆ ಮಾಡಿದನು. ಜನಕರಾಜನ ಅರಮನೆಯಲ್ಲಿ ಸೀತೆಯಾಗಿ ಬೆಳೆಯುವುದು.

"ನನಗಿಲ್ಲದ ವೈಭವಗಳು ನನ್ನ ಮಗುವಿಗೆ ದೊರಕಬೇಕು. ಯಾವುದೋ ಆಶ್ರಮವಾಸಿಯನ್ನು ಕೈ ಹಿಡಿವ ಯೋಗ ನನ್ನ ಮಗಳಿಗೆ ಬೇಡ". ಸೀತೆಯನ್ನು ಅಹಲ್ಯೆಯ ಮಗಳೆಂದು ಹೇಳುವ ಲಕ್ಷ್ಮೀಶ ತೋಳ್ಪಾಡಿಯವರು ಒಮ್ಮೆ ಹೇಳಿದ ಸಂಗತಿಯನ್ನು ಲೇಖಕಿ ನಾಟಕದಲ್ಲಿ ಬೆಳೆಸಿರುವುದನ್ನು ಹೇಳಿಕೊಂಡಿದ್ದಾರೆ. ಸೀತೆ ಅಯೋನಿಜೆಯಲ್ಲ ಆ ಸಂದರ್ಭದ ಅಹಲ್ಯೆಯ ಪಾತ್ರಪೋಷಣೆ, ಸನ್ನಿವೇಶ, ಹುಲ್ಲು ಮನೆಯ ನಿರ್ಮಾಣ, ಶಾಪಗ್ರಸ್ತ ಅಹಲ್ಯೆಗೆ ಪಡಿಪದಾರ್ಥಗಳನ್ನು ಪೂರೈಸುವ ಮಾಧವಿಯ ಆರೈಕೆ ಎಲ್ಲವೂ ವಾಸ್ತವಕ್ಕೆ ಬಹಳ ಹತ್ತಿರವಾಗಿವೆ. ಸೀತೆ ಹೀಗೆ ಹುಟ್ಟಿದ ಮಗಳು ಎಂದು ಅರಗಿಸಿಕೊಳ್ಳಲಾಗದಿದ್ದರೂ ಹೆಸರುಗಳಲ್ಲಿನ ಸಾಮ್ಯತೆಯ ಸಮಜಾಯಿಷಿ ಅತ್ಯಂತ ಸೂಕ್ತವಾಗಿದೆ. ಅಹಲ್ಯೆ ಎಂಬ ಶಬ್ದಕ್ಕೆ ಕೆಲವು ಅರ್ಥಗಳಿವೆ. 'ಸೀತೆ' ನೇಗಿಲ ಸಾಲಾದರೆ 'ಅಹಲ್ಯೆ' ನೇಗಿಲಾಡದ, ಉಳಲಾಗದಿರುವ, ಇನ್ನೂ ಉಳದ ಭೂಮಿ. ರಾಮನು ಆಕೆಯನ್ನು ಉದ್ಧಾರ ಮಾಡಿದ ಪ್ರಸಂಗವನ್ನು ಕೆಲವು ವ್ಯಾಖ್ಯಾನಕಾರರು ಉಳುಮೆಗೆ ಬಾರದಿರುವ ಭೂಮಿಯನ್ನು ಬೇಸಾಯಕ್ಕೆ ತಂದವನು

ಎಂದೂ ಪ್ರತಿಪಾದಿಸಿದ್ದಾರೆ. 'ಹಲ' ಎಂದರೆ ವಿಕಾರವೆಂದರ್ಥ. 'ಹಲ್ಯ'ವೆಂದರೆ ವಿಕಾರ ಜನ್ಯವಾದ ದೋಷ. ಯಾರಲ್ಲಿ ಹಲ್ಯವೆಂಬುದೇ ಇಲ್ಲವೋ ಅವಳು ಅಹಲ್ಯೆ.

ಈಗ ಅಹಲ್ಯೆಗಿತ್ತ ಶಾಪ ಅರ್ಥವತ್ತಾಗಿವೆ. ಅವಳಿಗೆ ಶಾಪಕೊಡುವಷ್ಟರಲ್ಲಿ ಗೌತಮನಿಗೆ ತತ್ಕಾಲದಲ್ಲಿ ಕವಿದಿದ್ದ ಮಾಯೆ ಮರೆಯಾಗುತ್ತದೆ. ಕ್ರೋಧ ಪರವಶನಾಗಿದ್ದರೂ ಭವಿಷ್ಯ ಕೃತಿಯ ದೃಶ್ಯವನ್ನು ಕಾಣುತ್ತಾನೆ. ಹಾಗಿರದಿದ್ದರೆ, ಅವನಿಗೆ ಸಾವಿರಾರು ವರ್ಷಗಳ ನಂತರ ಇಕ್ವಾಕು ವಂಶದವನಾದ ದಶರಥ ಮಹಾರಾಜನ ಗರ್ಭದಲ್ಲೇ ಶ್ರೀರಾಮನೆಂಬ ಅಭಿಧಾನದಿಂದ ಶೋಭಿಸುವ ವ್ಯಕ್ತಿ ಜನ್ಮತಾಳುತ್ತಾನೆ ಎಂಬುದು ಹೇಗೆ ಹೊಳೆಯುತ್ತಿತ್ತು? ಮತ್ತು ಆತ ಈ ಮಾರ್ಗವಾಗಿಯೇ ಬರುತ್ತಾನೆ. ಅವನ ದರ್ಶನದಿಂದ ಮೋಕ್ಷ ಪಡೆದು ಮತ್ತು ತನ್ನನ್ನು ಸೇರುವೆ ಎಂದು ಹೇಳಿದ್ದು ಮಹದಾರ್ಥಗರ್ಭಿತವಾಗಿದೆ. ಶಿಕ್ಷಾರೂಪವಾದ ಈ ಶಾಪವು ಭವಿಷ್ಯದಲ್ಲಿ ಹೇಗೆ ಫಲಿಸಿತು? ಅದಕ್ಕೆ ಆ ಶಾಪವನ್ನು ನಿಶ್ಚಿಂತೆಯಿಂದ ಪಶ್ಚಾತ್ತಾಪ ಪಡೆದು ಮೌನವಾಗಿ ದಿಟ್ಟತನದಿಂದ ಅಂತಃಕರಣ ಪೂರ್ವಕವಾಗಿ, ಸಹಧರ್ಮಚಾರಿಣಿ ಯಾಗಿ ಸ್ವೀಕರಿಸಿದ್ದಾಳೆ, ಶಿಕ್ಷಾರೂಪದ ಶಾಪವನ್ನು ವರವನ್ನಾಗಿ ಪರಿವರ್ತಿಸಿದಳು ಅಹಲ್ಯೆ.

ಅಷ್ಟಾವಕ್ರ ಮುನಿ ಅಹಲ್ಯೆಯನ್ನು ಕ್ಷಮಿಸಿ ಅವಳನ್ನು ಮಗಳಂತೆ ಸ್ವೀಕರಿಸಿ ಅವಳ ಆಪತ್ಕಾಲಕ್ಕೆ ಅನುವಾಗುವುದು, ಮಗುವಾದನಂತರ ಅಹಲ್ಯೆ, ಅಧ್ಯಯನ, ತಪದಲ್ಲಿ ತೊಡಗುವುದು, ರಾಮ, ಕಾಡಿನಲ್ಲಿ ಹುಲ್ಲು ಕಳೆಗಳಿಂದ ಸುತ್ತುವರೆದ ಅಹಲ್ಯೆಯ ಕುಟೀರಕ್ಕೆ ಬರುವ ಪ್ರಸಂಗ ಇಂದ್ರನ ಕಪಟದ ಅರಿವಾಗಿ ಅಹಲ್ಯೆ ಪಶ್ಚಾತ್ತಾಪ ಪಡುವುದು. ಸ್ತ್ರೀ ಸ್ವಾತಂತ್ರ್ಯದ ಹಿನ್ನೆಲೆಯಲ್ಲಿ ಶೈಕ್ಷಣಿಕ – ಒಳನೋಟ ಒಂದನ್ನು ತಂದಿರುವುದು ನಾಟಕದಲ್ಲಿ ಸಮಯೋಚಿತವಾಗಿದೆ. ಕೊನೆಗೆ ಅಹಲ್ಯೆ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಮನವೊಲಿಸಬೇಕು. ಆರಂಭದಲ್ಲಿ ಸಂಖ್ಯೆ ತುಸು ಕಡಿಮೆಯಾಗಬಹುದು. ನಂತರ ಬಂದೇ ಬರುತ್ತಾರೆ. ಮಹಿಳಾ ಶಿಕ್ಷಣಕ್ಕೆ ಒತ್ತುಕೊಡುವುದಲ್ಲದೇ ಆಶ್ರಮವನ್ನು ತಾನೇ ನಡೆಸುವ ನಿರ್ಧಾರ ತೆಗೆದುಕೊಳ್ಳುವುದು– ಈ ಎಲ್ಲವೂ ಮೂಲಕ್ಕೆ ಹತ್ತಿರವಿಲ್ಲದಿದ್ದರೂ ಸಹ ಕಲಾಸತ್ಯವಾಗಿ ಮನವರಿಕೆ ಮಾಡಿಸುತ್ತದೆ. ಇದು ನಾಟಕದ ಯಶಸ್ಸು ಈ ಕಾರಣಕ್ಕೆ ಲೇಖಕಿ ಉಷಾ ನರಸಿಂಹನ್ ಅವರನ್ನು ಅಭಿನಂದಿಸಲೇಬೇಕು.

'ಕನ್ನಡಿ' ಮನುಷ್ಯನ ಚಂಚಲತೆಗೆ ಸಾಂಕೇತಿಕ ನಿದರ್ಶನವಾಗಿ ತೆಗೆದುಕೊಳ್ಳಲಾಗಿದ್ದು, ಅಹಲ್ಯೆಯ ದುರಂತಗಳಿಗೆ ಈ ಕನ್ನಡಿಯೇ ನಾಂದಿಯಾಗುತ್ತದೆ. ಕನ್ನಡಿಯ ಮೋಹಕ್ಕೆ ಬಿದ್ದವರಿಗೆ ಯಾರ ವಿವೇಕದ ಮಾತು ಯಾವತ್ತಿಗೂ ರುಚಿಸುವುದಿಲ್ಲ ಎಂಬುದನ್ನು ತುಂಬ ಚೆನ್ನಾಗಿ ನಿರೂಪಿಸಿದ್ದಾರೆ. ಒಟ್ಟಿನಲ್ಲಿ ಅಹಲ್ಯಾ ಮತ್ತು ಗೌತಮ ಬೇರೆ ಬೇರೆ ರೀತಿಯ ಉಗ್ರ ತಪಸ್ಸುಗಳಿಂದ ಉದ್ಧಾರಗೊಂಡರು. "ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್–ವ್ಯೂಹರಚನೆಯೊಳ್" ಎಂಬುದು ಕುವೆಂಪು ಶ್ರೀರಾಮಾಯಣದರ್ಶನದ ಉಕ್ತಿ.

**ಪರಾಮರ್ಶನ ಗ್ರಂಥಗಳು**


- ಉಷಾ ನರಸಿಂಹನ್. (2019). *ಕಂಚುಗನ್ನಡಿ.* ಅನನ್ಯ ಪ್ರಕಾಶನ.
- ಪು.ತಿ.ನ. *ಅಹಲ್ಯೆ.*
- ಶಿವರಾಮೇಗೌಡ ನಾಗವರ. *ಯದುಗಿರಿ–ಪು.ತಿ.ನ ಅವರ ಅಭಿನಂದನ ಗ್ರಂಥ.* ಡಿವಿಕೆ ಮೂರ್ತಿ.
- ವಿಷ್ಣುಭಟ್ಟ ಡಿ. *ಶೋಷಿತ ಮಹಿಳೆ ಅಹಲ್ಯೆ.*
- ಸೀತಾಸುತ. (1996). *ಆಧುನಿಕ ದೃಷ್ಟಿಯಲ್ಲಿ ಅಹಲ್ಯೆ.*
- ದೇಜಗೌ & ಹೆಚ್.ಜೆ.ಲಕ್ಕಪ್ಪಗೌಡ. (ಸಂ.) *ಕುವೆಂಪು ಸಾಹಿತ್ಯ–ತೌಲನಿಕ ಅಧ್ಯಯನ.*